'ಕಿವಿ ಕೆಪ್ಪಾ ನಿಮ್ಗೆ? ನನ್ನ ಮಾತು ಅಂದ್ರೆ ಮೂರುಕಾಸಿನ ಬೆಲೆ ಇಲ್ಲ. ಬರೀ ಸಸಾರ...'

"ಮಹಾ ಖರ್ಚು ಬರೋದು ಅಷ್ಟ್ರಲ್ಲೇ ಇದೆ ಕಣೇ. ಅಬ್ಬಬ್ಬಾ ಅಂದ್ರೆ ಮನೆ ಬಾಡಿಗೆ..."

"ಅದೇನು ಪುಗಸಟ್ಟೆ ಹಿತ್ತಿಲ ಗಿಡದಲ್ಲಿ ಬೆಳೆಯುತ್ತಾ? ಯಾಕೆ ದಂಡ ಮಾಡ್ಬೇಕು?"

ಎಲ್ಲರೂ ಒಪ್ಪುವಂತಾ ಸಕಾರಣ ಕೊಟ್ಟಿದ್ದ ನಾಗೇಶ. ಇರುವ ಇಬ್ಬರು ಮಕ್ಕಳು ಓದಿ, ಬರೆದು ವಿದ್ಯಾವಂತರಾಗುವುದು ಬೇಡವಾ? ಹೆಸರಿಗೆ ಊರಿನಲ್ಲೊಂದು ಸರ್ಕಾರಿ ಶಾಲೆಯಿದ್ದರೂ ಏಕೋಪಾಧ್ಯಾಯ ಶಾಲೆಯ ಮೇಷ್ಟರು ರಜಾ ಹಾಕಿಕೊಂಡಿರುತ್ತಿದ್ದುದೇ ಹೆಚ್ಚು. ಇಂಗ್ಲಿಷ್ ಮಾಧ್ಯಮದ ಸ್ಕೂಲಿಗೆ ಸೇರಿಸಿ ಮಕ್ಕಳನ್ನು ಓದಿಸಿದರೆ ನಾಳೆ ಅವರ ಭವಿಷ್ಯ ಉಜ್ವಲವಾಗುವುದರ ಕುರಿತು ಮಡದಿಯನ್ನು ನಂಬಿಸಿದ್ದ ನಾಗೇಶ. ಸೌಭಾಗ್ಯನ ಬಾಯಿ ಕಟ್ಟಿದಂತಾಗಿದ್ದರೂ ಅಸಮಾಧಾನ ಕಮ್ಮಿಯಾಗಿರಲಿಲ್ಲ.

"ನಾಕನೇ ಕ್ಲಾಸ್ ವರೆಗೆ ಇಲ್ಲೇ ಓದ್ಲಿ. ಆಮೇಲೆ ನೋಡ್ಕಂಡ್ರಾಯ್ತುಪ್ಪಾ. ಇನ್ನೂ ನೆಟ್ಟಗೆ ಕುಂಡೆ ತೊಳ್ಕಳ್ಳೋಕೆ ಬರಲ್ಲ, ಆಗ್ಲೇ ಅಪ್ಪ, ಅಮ್ಮನ್ನ ತೊರೆಸಿ ಬೇರೆ ಮಾಡ್ಬೇಕಾ? ಬುದ್ಧಿ ಇಲ್ಲ ನಿಮ್ಗೆ..."

"ಒಂದು ಕೆಲಸ ಮಾಡು, ನಿಂಗೂ ಸಮಾಧಾನ, ನಂಗೂ..."

"ಎಂತದು? ಹೇಳಿ..."

"ಮಕ್ಕಳ ಜೊತೆ ನೀನು ಪೇಟೇಲಿರು. ನಾನು ವಾರಕ್ಕೆರಡು ಸಲ ಬಂದು ಹೋಗ್ತೀನಿ."

ತನಗೆ ಬಂದ ಸಿಟ್ಟಿನಲ್ಲಿ ಸೌಭಾಗ್ಯ ಥರಗುಟ್ಟಿದ್ದಳು.

"ಕೋಳೀಗೂಡಿನಂತಾ ಮನೇಲಿರೋಕೆ ನಂಗೇನು ಗ್ರಾಚಾರ? ದೇವ್ರು ಇಂತಾ ಮನೆ, ಅಂಗಳ, ಬಾಗಿಲು ಎಲ್ಲಾ ಕೊಟ್ಟಿರ್ಬೇಕಾದ್ರೆ ತಗೊಂಡ್ಹೋಗಿ ಜೈಲಿಗೆ ಹಾಕೋಕೆ ನೋಡ್ತೀರಾ? ನಿಮ್ಮ ಬುದ್ಧಿ ಗೊತ್ತುಂಟು ನಂಗೆ. ಅವಳು ಇಲ್ಲಿ ಮಾರಾಣಿ ಮೊಮ್ಮಗಳ ಹಂಗೆ ರಾಜ್ಯಭಾರ ಮಾಡ್ಲಿ. ನಾನು ಅಲ್ಲಿ ನಬೀತೀನಿ."

ನಾಗೇಶ ಮಕ ತಿರುಗಿಸಿಕೊಂಡು ಅಂಗೈಯಲ್ಲಿ ಬಾಯಿ ಮುಚ್ಚಿ ನಕ್ಕಿದ್ದನ್ನು ಗಮನಿಸಿದ್ದಳು ಕಾವೇರಿ. ದಿನಾ ನಡೆಯುತ್ತಿದ್ದ ಜಟಾಪಟಿ ಕೇಳಿ ಕೇಳಿ ಅವಳಿಗೆ ತಲೆ ಚಿಟ್ಟು ಹಿಡಿದಂತಾಗಿತ್ತು. ಅಣ್ಣನ ಕಾಲಬುಡ ಬಿಟ್ಟರೆ ಬೇರೆ ಗತಿಯಿಲ್ಲ. ಇಲ್ಲದಿದ್ದರೆ ಯಾವತ್ತೋ ಅವಳು ಇಲ್ಲಿಂದ ಜಾಗ ಖಾಲಿ ಮಾಡುತ್ತಿದ್ದಳು. ಹೆಸರಿಗೆ ಇದ್ದಾನೆ ಇನ್ನೊಬ್ಬ ಅಣ್ಣ. ಬೆಂಗಳೂರಿನ ಕಾಲೇಜಿನಲ್ಲಿ ಲೆಕ್ಚರರ್ರು. ಹೆಂಡತಿಯೂ ಅದೇ ಉದ್ಯೋಗ ಮಾಡುತ್ತಿದ್ದಾಳೆ. ಇಬ್ಬರಿಗೂ ಕೈ ತುಂಬಾ ಸಂಬಳ. ಮಾತಿಗಾದರೂ ಒಂದು ದಿನ ಬಾ ಅನ್ನುವುದಿಲ್ಲ. ಒಂದು ಗಜ ಕುಪ್ಪಸದ ಬಟ್ಟೆ ತಂದುಕೊಡುವುದಿಲ್ಲ. ವರ್ಷಕ್ಕೆ ಎರಡು ಸಲ ಹರಕೆ ಹೇಳಿಕೊಂಡವನ ಹಾಗೆ ಅಪ್ಪ, ಅಮ್ಮನ ವೈದೀಕಕ್ಕೆ ಬಂದು ಹೋಗುತ್ತಾನೆ. ಹುಟ್ಟೂರಿನ ಸಂಬಂಧ ಇಷ್ಟಕ್ಕೆ ಸೀಮಿತ. ಹಚ್ಚಿಕೊಂಡರೆ ಎಲ್ಲಿ ಅಂಟುಪುರುಲೆಯಾಗುತ್ತಾಳೋ ಎನ್ನುವ ಹೆದರಿಕೆ ಇರಬೇಕು. ಮಗ ಹುಟ್ಟಿದಾಗ ಸ್ವತಾ ಅವನನ್ನು ನೋಡಿಕೊಳ್ಳಲು ಕೈ ತುಂಬಿ ಚೆಲ್ಲುವಷ್ಟು ದುಡ್ಡು ಕೊಟ್ಟು ಇಲ್ಲಿಂದ ಒಂದು ಹುಡುಗಿಯನ್ನು ತಲಾಷು ಮಾಡಿ ಕರೆದುಕೊಂಡು ಹೋದನೇ ವಿನಾ ತಂಗಿಯನ್ನು ಹತ್ತಿರ ಬಿಟ್ಟುಕೊಳ್ಳಲಿಲ್ಲ. ಸೌಭಾಗ್ಯ ಬಾಯ್ಬಿಟ್ಟು ಹೇಳಿದ್ದಳು,

"ಅದೆಂತಕ್ಕೆ ಕಣ್ಣಲ್ಲಿ ಎಣ್ಣೆ ಬಿಟ್ಕೊಂಡು ಜನ ಹುಡುಕ್ತೀರಿ ಭಾವ? ಕಾವೇರೀನ ಕರ್ಕೊಂಡು ಹೋದ್ರೆ ಅವಳಿಗೂ ಒಂದು ಬದಲಾವಣೆ. ನಿಮಗೂ ಮನೆ ಕಡೆ ನಿಶ್ಚಿಂತೆ".

ಅಣ್ಣನ ಮುಖ ಕಪ್ಪಾಗಿತ್ತು.